**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.960/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ತಿರಕಪ್ಪ ಮತ್ತಿಹಳ್ಳಿ | ಪಿಡಬ್ಲ್ಯೂ | 03 |
| ತಂದೆಃಗಂಡನ ಹೆಸರು | : | ಫಕ್ಕೀರಪ್ಪ | ಸಿಡಬ್ಲ್ಯೂ | 09 |
| ವಯಸ್ಸು | : | 40 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ತುಡಾನೀರು ತಾಃ ಸೊರಬ ಜಿಃ ಶಿವಮೊಗ್ಗ | | |

**ದಿನಾಂಕ: 24.09.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಚಾಸಾ-1 ರವರು ಗೊತ್ತು. 1 ನೇ ಆರೋಪಿ ಗೊತ್ತು. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಆದರೆ ಮೃತ ಮಹಾದೇವಪ್ಪ ಹುಬ್ಬಳ್ಳಿ ಅವರ ಶವ ತರಲು ತಿಳುವಳ್ಳಿ ಆಸ್ಪತ್ರೆಗೆ ಹೋಗಿದ್ದೆನು. ಈ ಬಗ್ಗೆ ಪೋಲಿಸರು ನನ್ನ ಹೇಳಿಕೆ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿನಾಂಕಃ 26.05.2018 ರಂದು 1 ನೇ ಆರೋಪಿ ತನಗೆ ಪೋನ್ ಮೂಲಕ ಗೊಂದಿ ತಿಳುವಳ್ಳಿ ರಸ್ತೆಯ ಶೇಖಪ್ಪ ಕೊಂಡೋಜಿ ಅವರ ಕೋಳಿ ಪಾರಮ್ ಹತ್ತಿರ ಅಪಘಾತವಾಗಿದ್ದು ಈ ವಿಚಾರವನ್ನು ತಿಳಿಸಿದರು ಎಂದರೆ ಸರಿಯಲ್ಲ. ತಕ್ಷಣ ಆ ಸ್ಥಳಕ್ಕೆ ಹೋಗಿ ನೋಡಲಾಗಿ ಮಹಾದೇವಪ್ಪ ಹುಬ್ಬಳ್ಳೇರ ಮತ್ತು ಕುಮಾರ ಎಂಬುವವರು ಆ ರಸ್ತೆಯ ಮೇಲೆ ಗೊವಿನ ರಾಶಿಗೆ ಡಿಕ್ಕಿಪಡಿಸಿ ಬಿದ್ದಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಮಹಾದೇವಪ್ಪ ಹುಬ್ಬಳ್ಳೇರ ಅವರು ತೀವ್ರ ಸ್ವರೂಪದ ಗಾಯಗಳಾಗಿ

ಸ್ಥಳದಲ್ಲಿ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ಇದರಿಂದ 1 ನೇ ಆರೋಪಿಗೂ ಸಹ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಆ ಮೊಟಾರ್ ಸೈಕಲ್ ಶೈನ್ ಕಂಪನಿಯದ್ದಾಗಿದ್ದು ಅದರ ನಂ.ಕೆಎ-15 ಡಬ್ಲ್ಯೂ-9140 ಆಗಿತ್ತು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆಲ್ಲಿದ್ದ ಜನರು 1 ನೇ ಆರೋಪಿ ಆ ಮೊಟಾರ್ ಸೈಕಲನು ಅತೀ ವೇಗವಾಗಿ ಮತ್ತು ಅಜಾಗರುಕತೆಯಿಂದ ಆನವಟ್ಟಿ ಕಡೆಯಿಂದ ಹಾನಗಲ್ ಕಡೆಗೆ ಚಲಾಯಿಸಿಕೊಂಡು ಬಂದು ಆ ರಸ್ತೆಯಲ್ಲಿ ಹಾಕಿದ್ದ ಜೋಳದ ರಾಶಿಗೆ ಡಿಕ್ಕಿಪಡಿಸಿ ಕೆಳಗಡೆ ಬಿದ್ದರು ಎಂದು ತಿಳಿಸಿದರು ಎಂದರೆ ಸರಿಯಲ್ಲ.

ಆ ಸ್ಥಳದಲ್ಲಿ ಸುಮಾರು 9 ಜೋಳದ ರಾಶಿಗಳಿದ್ದು ಅವುಗಳ ರಸ್ತೆ ಎಡಭಾಗದಲ್ಲಿ ಹಾಕಿದ್ದು ಮೊದಲನೇ ಜೋಳದ ರಾಶಿ ಶೇಖಪ್ಪ ಗಾಳಪುಜಿ ಅವರಿಗೆ ಸಂಬಂಧಿಸಿದ್ದು ಆ ಜೋಳದ ರಾಶಿಗೆ ಆರೋಪಿ ತನ್ನ ಮೊಟಾರ್ ಸೈಕಲನ್ನು ಡಿಕ್ಕಿಪಡಿಸಿದನು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಉಳಿದ ಜೋಳದ ರಾಶಿಗಳು ಉಳಿದ ಆರೋಪಿತರಿಗೆ ಸಂಬಂಧಿಸಿದ್ದುವು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಹೇಳಿಕೆ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ಆ ನಂತರ ಮಹದೇವಪ್ಪ ಹುಬ್ಬಳ್ಳೇರ ಶವವನ್ನು ತಿಳುವಳ್ಳಿ ಆಸ್ಪತ್ರೆಗೆ ಕಳುಹಿಸಿ 1 ನೇ ಆರೋಪಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿ ಕೊಟ್ಟೆನು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**:ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎ ಸಿ ಸಿ ವಕೀಲರಿಂದ:**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್